# ಶ್ರೀ ಅನ್ನದಾನ ವಿಜಯ ಪ್ರೌಢ ಶಾಲೆ

## ಸುವರ್ಣ ಮಹೋತ್ಸವ ಗ್ರಂಥ



# ಸುವರ್ಣ ಝರಿ



## ಮರೆಸದಿರು, ಕಾಲ!

ಎಲ್ಲ ಸಾವು ನೋವುಗಳನ್ನೂ
ಮರೆಸಿ ಬಿಡುವ ಕಾಲ.
ನಿನಗೆ ನೆನಕೆಗಳು ಸಲ್ಲಲೇಬೇಕು.

ಆದರೆ ಕಾಲ,
ಮರೆಸದಿರು
ಆತ್ಮಶ್ರೀನಿಧಿ
ಅನ್ನದಾನೀಶ್ವರರಂಥ
ಯತೀಶ್ವರರ
ತಪಃಪ್ರಭಾವವನ್ನು,
ಮಹಾನುಭಾವನನ್ನು!

ಅಂಥವರ ನೆನಹೆ
ಮಾನವರ ಮನದ ತಮಸ್ಸಿಗೆ
ಬಜ್ಜರದ ಹೆಜ್ಜೊಡರು,
ಬೆಳಕಿನ ತವರು!

ತಮಸ್ಸು ಬಗ್ಗುವುದು
ತಪಸ್ಸಿಗೆ ಮಾತ್ರ.
ಅಲ್ಲವೆ ಕಾಲ?
ಮರೆಸದಿರು ತಪಸ್ಸನ್ನು
ಅನುಭಾವಿಗಳ ಓಜಸ್ಸನ್ನು,
ಅರಿವಿನ ದೊರೆಗಳ ತೇಜಸ್ಸನ್ನು,
ಬೆಳೆಸದಿರು ತಮಸ್ಸನ್ನು!
'ಅನ್ನದಾನವಿಜಯ'ದಂಥ
ವಿದ್ಯಾಪ್ರಸಾರಕ ಸಮಿತಿಗಳನ್ನು
ಜ್ಞಾನಶೀಲ ಸತ್ಕ್ರಿಯೆಗಳ
ಸಂಗಮಸ್ಥಾನಗಳನ್ನು
ಎಷ್ಟಾದರೂ ಬೆಳೆಸು,
ಬಲಿಸು, ಬೆಳಗಿಸು!

— ಸಿದ್ದಯ್ಯ ಪುರಾಣಿಕ